ದಿಃ **07-03-2026** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.**KNR** ವಕೀಲರವರಿಂದಃ

**06.** ಶಿವಪ್ಪ ಮುದಿಮಲ್ಲಪ್ಪರವರ ಸಹಿ ಖರೀದಿ ಪತ್ರದ ಮೇಲಿ ಇರುವ ದಾಖಲೆ ತೋರಿಸಿ ಗುರುತು ಹಿಡಿಯುತ್ತಿರ ಎಂದು ಸಾಕ್ಷಿಗೆ ನಿ.ಪಿ.**1** ನ್ನು ತೋರಿಸಿ ಸಾಕ್ಷಿಯು ಶಿವಪ್ಪ ಮುದಿಮಲ್ಲಪ್ಪರವರ ಸಹಿ ಸದರಿ ದಾಖಲೆಯಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಈ ಹಿಂದೆ ಮಾಡಿದ ಪಾಟೀಸವಾಲಿನಲ್ಲಿ ಶಿವಪ್ಪ ಮುದಿಮಲ್ಲಪ್ಪರವರ ಸಹಿ ಖರೀದಿ ಪತ್ರಕ್ಕೆ ಇರುತ್ತದೆ ಎಂದು ಹೇಳಿದ್ದು ಈ ದಿನ ಅವರ ಸಹಿ ಖರೀದಿ ಪತ್ರದಲ್ಲಿ ಇರುವುದಿಲ್ಲ ಎಂದು ಹೇಳಿದ್ದು ಯಾವುದು ಸರಿ ಎಂದರೆ ಶಿವಪ್ಪ ಮುದಿಮಲ್ಲಪ್ಪರವರ ಸಹಿ ಖರೀದಿ ಪತ್ರದ ಮೇಲೆ ಇರುವುದಿಲ್ಲ ಎಂದು ನಿಖಾರವಾಗಿ ನನಗೆ ಗೊತ್ತಿರಲ್ಲಿಲ್ಲ. ನಿಪಿ-**1** ಚಕ್ಕುಬಂದಿ ಪೂರ್ವಕ್ಕೆ - ಮರಿಹೊನ್ನಪ್ಪನವರ ಬಸಪ್ಪರವರ ಹೊಲ, ಪಶ್ಚಮಕ್ಕೆ - ತಳವಾರ ನಾಗಪ್ಪರವರ ಹೊಲ, ಉತ್ತರಕ್ಕೆ -ಮರಿಹೊನ್ನಪ್ಪನವರ ಬಸಪ್ಪರವರ ಹೊಲ, ದಕ್ಷಿಣಕ್ಕೆ - ಪ್ರಸುತವಾಗಿ ಬೆಂಡಿಗೇರಿ ಈರಣ್ಣನವರ ಹೊಲ ಇದ್ದು ನಾವು ಖರೀದಿ ಮಾಡಿದಾಗ ಮರಿಹೊನ್ನಪ್ಪನವರ ಮದ್ದಾನಪ್ಪ ಹೊಲ ಇತ್ತು.

**07.** ನಿಪಿ -**7** ನ್ನು ನಾನು ನೊಡಿರುತ್ತೇನೆ . ನಿಪಿ-**7** ರ ಚಕ್ಕುಬಂದಿಯನ್ನು ಪರಿಶೀಲನೆ ಮಾಡಿ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ-**7** ರಲ್ಲಿ ಪೂರ್ವಕ್ಕೆ - ಮರಿಹೊನ್ನಪ್ಪನವರ ಬಸಪ್ಪರವರ ಹೊಲ ಎಂದರೆ ಸರಿ, ಪಶ್ಚಿಮಕ್ಕೆ - ತಳವಾರ ನಾಗಪ್ಪರವರ ಹೊಲ ಎಂದರೆ ಸರಿ, ಉತ್ತರಕ್ಕೆ -ಮರಿಹೊನ್ನಪ್ಪನವರ ಮದ್ದಾನಪ್ಪರವರ ಹೊಲ ಎಂದರೆ ಸರಿ , ದಕ್ಷಿಣಕ್ಕೆ - ಮರಿಹೊನ್ನಪ್ಪನವರ ಬಸಪ್ಪರವರ ಹೊಲ ಎಂದರೆ ಸರಿ. ನಿಪಿ-**1** ರಲ್ಲಿ ಉತ್ತರಕ್ಕೆ - ಮರಿಹೊನ್ನಪ್ಪನವರ ಬಸಪ್ಪರವರ ಹೊಲ ಎಂದು ಬರೆಸಿರುತ್ತೇನೆ ಎಂದರೆ ಸರಿ. ನಿಪಿ -**7** ಉತ್ತರಕ್ಕೆ -ಮರಿಹೊನ್ನಪ್ಪನವರ ಮದ್ದಾನಪ್ಪರವರ ಹೊಲ ಎಂದು ಇರುತ್ತದೆ ಯಾವುದು ಸರಿ ಎಂದರೆ ನಿಪಿ-**1** ರಲ್ಲಿ ಉತ್ತರಕ್ಕೆ - ಮರಿಹೊನ್ನಪ್ಪನವರ ಬಸಪ್ಪರವರ ಹೊಲ ಎಂದು ಬರೆಸಿರುವುದು ಸರಿ. ನಿಪಿ-**7** ರ ಚಕ್ಕುಬಂದಿಯು ಸರಿಯಾಗಿ ನೋಡಿರುವುದಿಲ್ಲ ಹೀಗಾಗಿ ನನ್ನ

ಅನೂಕೂಲಕ್ಕೆ ತಕ್ಕಂತೆ ನಿಪಿ-**1** ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಮಕಾವಾಸ್ತೇ ನನ್ನ ಅನುಕೂಲಕ್ಕೆ ತಕ್ಕ ಹಾಗೇ ನಾನು, ಸಿದ್ದಬಸಯ್ಯ ಮತ್ತು ಸಾಕ್ಷಿದಾರರ ನಿಪಿ-**1** ದನ್ನು ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನಮಕಾವಾಸ್ತೇ ಮಾಡಿಕೊಂಡಂತಹ ಖರೀದಿ ಪತ್ರವನ್ನು ಬಿಟ್ಟರೆ ಪ್ರತಿವಾದಿಯರೇ ದಾವಾ ಆಸ್ತಿಯ ಸ್ವಾದೀನದಲ್ಲಿ ಇರುತ್ತಾರೆ ಎಂದರೆ ನಾನೇ ಸ್ವಾಧೀನದಲ್ಲಿ ಇರುತ್ತೇವೆ.

**08. 2018** ರಲ್ಲಿ ಪ್ರತಿವಾದಿಯುರು ನನ್ನ ದಾವಾ ಅಸ್ತಿಗೆ ತೊಂದರೆ ಮಾಡಿರುತ್ತಾರೆ ಎಂದು ದೂರನ್ನು ನೀಡಿದ್ದು ಪ್ರತಿವಾದಿಯರು ಸಹ ನನ್ನ ಮೇಲೆ ಒಂದು ದೂರನ್ನು ನೀಡಿರುತ್ತಾರೆ ಎಂದರೆ ಸರಿ. ಕ್ರಿಮಿನಲ್ಲಿ ಪ್ರಕರಣಗಳಲ್ಲಿ ರಾಜಿಯಾಗಿರುತ್ತೇವೆ ಎಂದರೆ ಸರಿ. ಪ್ರತಿವಾದಿಯರು ಎಂದಿಗೂ ಸಿದ್ದಬಸಯ್ಯರವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ ಎಂದರೆ ನಾವು ಎಲ್ಲ ದಾಖಲೆಗಳನ್ನು ನೋಡಿ ಸಿದ್ದಬಸಯ್ಯರವರಿಂದ ಖರೀದಿ ಮಾಡಿರುತ್ತೇವೆ. ನನ್ನ ವಾದ ಪತ್ರ ಮತ್ತು ಪ್ರಮಾಣ ಪತ್ರದಲ್ಲಿ ಪ್ರತಿವಾದಿಯರು ದಾವಾ ಆಸ್ತಿಯ ಸ್ವಾಧೀನಕ್ಕೆ ತೊಂದರೆ ಮಾಡಿರುತ್ತಾರೆ ಎಂದು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಾದ ಪ್ರತದಲ್ಲಿ **26-12-2017** ಮತ್ತು **11-01-2018** ರಂದು ದಾವಾ ಆಸ್ತಿಯ ಸ್ವಾಧೀನಕ್ಕೆ ತೊಂದರೆ ಮಾಡಿರುತ್ತಾರೆ ಎಂದು ಸುಳ್ಳು ವ್ಯಾಜ್ಯ ಕಾರಣ ತೋರಿಸಿರುತ್ತೇನೆ ಎಂದರೆ ಅವರು ನಮಗೆ ತೊಂದರೆ ಮಾಡಿರುತ್ತಾರೆ.

**09.** ಸಿದ್ದಬಸಯ್ಯನಿಂದ ನಾನು ಮಾಡಿಕೊಂತಹ ಖರೀದಿ ಪತ್ರವು ಕಾನೂನು ಬಾಹಿರವಾಗಿರುತ್ತದೆ ಎಂದರೆ ಕಾನೂನಿನಲ್ಲಿ ಸರಿಯಾಗಿ ಇದ್ದರಿಂದ ನಾನು ಖರೀದಿ ಮಾಡಿರುತ್ತೇನೆ. ಪ್ರತಿವಾದಿಯರು ಸಿದ್ದಬಸಯ್ಯನ ಹೆಸರಿಗೆ ನಾಮಕಾವಸ್ತೇ ಮಾಡಿದಂತಹ ಖರೀದಿ ಪತ್ರದ ಮುಂಚೆಯು ಮತ್ತು ನಂತರ ದಲ್ಲಿಯು ಹಾಗೂ ಯಾವಾಗಲೂ ದಾವಾ ಅಸ್ತಿಯ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಅವರು ಮುಂಚೆಯು ಬೇರೆಯವರಿಂದ ಉಳುಮೇ ಮಾಡಿಸುತ್ತಿದ್ದು ನಾನು ಸಿದ್ದಬಸಯ್ಯನಿಂದ ಖರೀದಿ ಮಾಡಿ ನಂತರ ನಾನು ಸ್ವಾಧೀನದಲ್ಲಿ ಇರುತ್ತೇನೆ. ಪ್ರತಿವಾದಿಯರು ಮುಂಚೆ ಬೇರೆಯವರಿಂದ ಉಳುಮೇ ಮಾಡಿಸುತ್ತಿದ್ದರು ಎಂಬ ವಿಷಯವನ್ನು ನನ್ನ ಪ್ರಮಾಣ

ಪತ್ರದಲ್ಲಿ ನಾನೆ ಏಕೆ ಬರೆಸಬೇಕು. **2017** ರಲ್ಲಿ ಪ್ರತಿವಾದಿಯರು ನಾನು ಟ್ರಾಕ್ಟರ್ ಹೊಡಿಸೋ ಸಮಯದಲ್ಲಿ ಅಡ್ಡಿ ಪಡಿಸಿದರು ಎಂಬ ಮಾತು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಯರು ತೊಂದರೆ ಕೊಡುವ ಸಮಯದಲ್ಲಿ ಅಕ್ಕ-ಪಕ್ಕದವರದಂತಹ ಗಡ್ಡಿ ಶಿವಪ್ಪ ಮತ್ತು ಇತರರು ಬಂದು ದಾವಾ ಆಸ್ತಿಯು ನನ್ನದು ಇರುತ್ತದೆ ಎಂದು ಸುಳ್ಳು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಈ ವಿಷಯವನ್ನು ನಾನು ನನ್ನ ವಾದ ಪತ್ರದಲ್ಲಿ ಬರೆಸಿರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"

**Sd/-**
(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.